ಮೇ 20, 2005

**ಬಡ್ಡಿ/ಅಸಲು ತಡವಾಗಿ ಸಂದಾಯವಾದುದಕ್ಕೆ, ಪರಿಹಾರ/ಉಳಿತಾಯ ಬಾಂಡ್ ಧಾರಕರಿಗೆ ಪರಿಹಾರ ನೀಡಿಕೆ**

ಪರಿಹಾರ/ಉಳಿತಾಯ ಬಾಂಡ್‌ಧಾರಕರಿಗೆ ಈ ಬಾಂಡ್ ಗಳಲ್ಲಿ ಹೂಡಿದ ಹಣದ ಮೇಲಿನ ಬಡ್ಡಿ ನೀಡಿಕೆ / ಹೂಡಿದ ಪಕ್ವತಾ ಮೊತ್ತದ ನೀಡಿಕೆಯಲ್ಲಿ ವಿಳಂಬವಾದುದರ ಪ್ರಯುಕ್ತ ಅವರಿಗೆ ಉಂಟಾದ ನಷ್ಟಕ್ಕೆ ಪರಿಹಾರ ನೀಡಬೇಕೆಂದು ಇಂದು ಭಾರತೀಯ ರಿಸರ್ವ್ ಬ್ಯಾಂಕು ವಾಣಿಜ್ಯ ಬ್ಯಾಂಕುಗಳಿಗೆ ತಿಳಿಸಿದೆ. ಪರಿಹಾರ ಮೊತ್ತವನ್ನು, ವಿಳಂಬವಾದಷ್ಟು ದಿನಗಳ ಅವಧಿಗೆ ಚಾಲ್ತಿ ಉಳಿತಾಯ ಖಾತೆ ದರದಲ್ಲಿ ನೀಡಲಾಗುತ್ತದೆ. ಅಂಥ ವಿಳಂಬ ತಮ್ಮ ಕಡೆಯಿಂದಾಗಿದ್ದರೆ ರಿಸರ್ವ್ ಬ್ಯಾಂಕು ಕಚೇರಿಗಳು ತಾವೇ ಅಂಥ ಪರಿಹಾರ ಮೊತ್ತವನ್ನು ನೀಡುವುದಾಗಿ ರಿಸರ್ವ್ ಬ್ಯಾಂಕು ತಿಳಿಸಿದೆ.

ರಿಸರ್ವ್ ಬ್ಯಾಂಕು, ಬ್ಯಾಂಕುಗಳಿಗೆ ಹಾಗೂ ತನ್ನ ಕಚೇರಿಗಳಿಗೆ ಬರೆದ ಪತ್ರದಲ್ಲಿ ಪರಿಹಾರ/ಉಳಿತಾಯ ಬಾಂಡ್‌ಗಳಲ್ಲಿ ಹಣ ಹೂಡಿರುವವರಿಗೆ ಉತ್ತಮ ಗ್ರಾಹಕ ಸೇವೆ ಒದಗಿಸಲು ಇಂಥ ನಿರ್ಣಯ ಕೈಗೊಳ್ಳಲಾಯಿತೆಂದು ತಿಳಿಸಿದೆ.

ರಿಸರ್ವ್ ಬ್ಯಾಂಕಿನ ಸೂಚನೆಗಳ ಮೇರೆಗೆ, ಬ್ಯಾಂಕುಗಳು ಪರಿಪಕ್ವತಾ ದಿನಾಂಕಕ್ಕಿಂತ ಒಂದು ತಿಂಗಳು ಮುಂಚಿತವಾಗಿ ಸಂಚಿತವಲ್ಲದ ಬಾಂಡುಧಾರಕರಿಗೆ ಬಡ್ಡಿ ಆದೇಶಿಕೆಯನ್ನು ಕಳುಹಿಸಬೇಕಾಗುತ್ತದೆ. ಸಂಚಿತ ಬಾಂಡುಗಳ ಅವಧಿ ತುಂಬಿದ ಮೌಲ್ಯದ ಸೂಚನಾ ಪತ್ರವನ್ನೂ ಮುಂಚಿತವಾಗಿಯೇ ಕಳುಹಿಸಬೇಕಾಗುತ್ತದೆ. ಬಾಂಡುಗಳ ಪರಿಪಕ್ವತಾ ದಿನಾಂಕದ ತರುವಾಯ ಬಾಂಡ್ ಧಾರಕನು ಖುಲಾಸೆ ಆದ ಬಂಡವಾಳ ಪತ್ರವನ್ನು ಸಲ್ಲಿಸಿದರೆ, ಅದನ್ನು ಸ್ವೀಕರಿಸಿದ ಐದು ಪೂರ್ಣ ಕೆಲಸದ ದಿನಗಳೊಳಗಾಗಿ ಬ್ಯಾಂಕು ಆತನಿಗೆ ಅವಧಿ ತುಂಬಿದ ದಿನಾಂಕದಂದು ಇದ್ದ ಮೌಲ್ಯದ ಮೊತ್ತವನ್ನು ಕಳುಹಿಸಬೇಕಾಗುತ್ತದೆ.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2004–2005/1220